<u>ಸಿವಿಲ್ ನ್ಯಾಯಾಧೀಶರು ಮತ್ತು  ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿರವರ ನ್ಯಾಯಾಲಯ., ಪಿರಿಯಾಪಟ್ಟಣ.</u>

<u>ಸಿ.ಸಿ.**365/2023**</u>

ಪಿರ್ಯಾದುದಾರರು : ರಾಜ್ಯದ ಪರ ಪಿರಿಯಾಪಟ್ಟಣ ಠಾಣಾ ಆರಕ್ಷಕರು
(ಸಹಾಯಕ ಸರ್ಕಾರಿ ಅಭಿಯೋಜಕರವರಿಂದ)

ವಿರುದ್ಧ

ಆರೋಪಿಗಳು : 1. ಶಂಕರ ಸಿ.ಆರ್.,
ಬಿನ್ ರಮೇಶ ನಾಯಕ, ?
ವಯಸ್ಸು 36 ವರ್ಷ,
ವಾಸಃ ರುದ್ರಪ್ಪ ಬಡಾವಣೆ,
ಪಿರಿಯಾಪಟ್ಟಣ ಟೌನ್.

2. ನಂದಿನಿ,
ಬಿನ್ ಸಿ.ಆರ್ ಶಂಕರ,
ವಯಸ್ಸು 25 ವರ್ಷ,
ವಾಸಃ ರುದ್ರಪ್ಪ ಬಡಾವಣೆ,
ಪಿರಿಯಾಪಟ್ಟಣ ಟೌನ್.

<u>ದೋಷಾರೋಪಣೆ</u>

ಶ್ರೀ ಯೋಗೇಶ.ಎಂ.ಆರ್., ಬಿ.ಎ., ಎಲ್.ಎಲ್.ಬಿ., ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಪಿರಿಯಾಪಟ್ಟಣ ಆದ ನಾನು ಆರೋಪಿಗಳಾದ ನಿಮ್ಮ ಮೇಲೆ ಈ ಕೆಳಕಂಡಂತೆ ದೋಷಾರೋಪಣೆ ರಚಿಸಿದ್ದೇನೆ :-

ಮೊದಲನೇಯದಾಗಿ, ಪಿರಿಯಾಪಟ್ಟಣ ತಾಲ್ಲೂಕು, ಹರವೇಮಲ್ಲರಾಜಪಟ್ಟಣ ಗ್ರಾಮದಲ್ಲಿ ಚಾಸಾ.3 ಕೆ.ಟಿ.ಸೋಮೇಗೌಡ ರವರು ಅವರ ಮಕ್ಕಳೊಂದಿಗೆ ಜಮೀನಿನಲ್ಲಿ ಮನೆಯನ್ನು ಕಟ್ಟಿಕೊಂಡು ವಾಸವಾಗಿದ್ದು, ಚಾಸಾ.2 ಮೋಹನ ಕೆ.ಎಸ್ ಮತ್ತು ಅವರ ಹೆಂಡತಿ ಚಾಸಾ.1 ಕೆ.ವೈ ಮೇಘ ರವರ ಬಳಿ 155 ಗ್ರಾಂ ಚಿನ್ನದ ಒಡವೆಗಳು ಇರುವ ವಿಚಾರವನ್ನು ಆರೋಪಿಗಳಾದ ನೀವು ತಿಳಿದಿದ್ದು, ಆರೋಪಿಗಳಾದ ನೀವು ಏಕೋದ್ದೇಶದಿಂದ, ವಂಚಿಸುವ ಸಲುವಾಗಿ, ನಿಮ್ಮ ಪೈಕಿ 2 ನೇ ಆರೋಪಿಯಾದ ನೀವು ನಿಮ್ಮ ಮೈ ಮೇಲೆ ಲಕ್ಷ್ಮೀ ದೇವರು ಬರುತ್ತದೆ ಎಂದು ನಂಬಿಸಿ, ಚಾಸಾ.1 ರವರಿಗೆ ನಿನ್ನ

ಬಳಿ ಇರುವ ಚಿನ್ನದ ಒಡವೆಗಳನ್ನು ನನಗೆ ಕೊಡು, ಒಂದು ಸಾರಿ ಎಲ್ಲಾ ಒಡವೆಗಳನ್ನು ಹಾಕಿಕೊಂಡು ಮತ್ತೆ ವಾಪಸ್ ಕೊಡುತ್ತೇನೆ, ಆವಾಗ ನಿಮಗೆ ನಿಮ್ಮ ಮನೆಗೆ ಒಳ್ಳೆದಾಗುತ್ತದೆ ಎಂದು 2ನೇ ಆರೋಪಿಯಾದ ನೀವು ಚಾಸಾ.1 ರವರನ್ನು ಮೋಸದಿಂದ ನಂಬಿಸಿ, ಆದರಂತೆ ದಿನಾಂಕ 22.02.2022 ರಂದು 2ನೇ ಆರೋಪಿಯಾದ ನೀವು ನಾನು ತಾಯಿ ಲಕ್ಷ್ಮೀದೇವಿ ನಮ್ಮ ಮಗ ಶಂಕರನನ್ನು ಮನೆಗೆ ಕಳುಹಿಸ್ತೀನಿ ಒಡವೆಗಳನ್ನು ಕೊಟ್ಟು ಕಳುಹಿಸಿ, ನಾನು ಒಡವೆಗಳನ್ನು ನನ್ನ ಮೈ ಮೇಲೆ ಹಾಕಿಕೊಂಡು ವಾಪಸ್ಸು ಕೊಡುತ್ತೇನೆ ಎಂದು ಹೇಳಿ ನಂಬಿಸಿ, ಮಧ್ಯಾಹ್ನ 2.30 ಗಂಟೆಯ ಸಮಯದಲ್ಲಿ, 1ನೇ ಆರೋಪಿಯಾದ ನೀವು ಚಾಸಾ.1 ರವರ ಮನೆ ಬಳಿ ಹೋಗಿ, ಚಾಸಾ.1 ರವರ 30 ಗ್ರಾಂ ಚಿನ್ನದ ಬಳೆ, 16 ಗ್ರಾಂ ಚಿನ್ನದ ಸರ, ತಲಾ 07 ಗ್ರಾಂ ಎರಡು ಜೊತೆ ಓಲೆ, 05 ಗ್ರಾಂ ಚಿನ್ನದ ಓಲೆ, ತಲಾ 03 ಗ್ರಾಂ ಎರಡು ಚಿನ್ನದ ಉಂಗುರಗಳನ್ನೊಳಗೊಂಡಂತೆ ಒಟ್ಟು 71 ಗ್ರಾಂ ಚಿನ್ನದ ಒಡವೆಗಳನ್ನು 1ನೇ ಆರೋಪಿಯಾದ ನಿಮಗೆ ಕೊಟ್ಟಿದ್ದು ಹಾಗೂ ಅದೇ ರೀತಿಯಲ್ಲಿ ದಿನಾಂಕ 25.03.2022 ರಂದು 2ನೇ ಆರೋಪಿಯಾದ ನೀವು ಚಾಸಾ.1 ರವರಿಗೆ ಕರೆ ಮಾಡಿ, ನೀನು ಹಾಕಿಕೊಂಡಿದ್ದ ಲಾಂಗ್ ಸರ ಮತ್ತು ಓಲೆ ಹಾಗೂ ಉಂಗುರವನ್ನು ಕೊಡು ನಾನು ಮೈಮೇಲೆ ಹಾಕಿಕೊಂಡು ಒಟ್ಟಿಗೆ ಎಲ್ಲಾ ಚಿನ್ನದ ಒಡವೆಗಳನ್ನು ವಾಪಸ್ಸು ಕೊಡುತ್ತೇನೆಂದು ಹೇಳಿ, 1ನೇ ಆರೋಪಿಯಾದ ನೀವು ದಿನಾಂಕ 27.03.2022 ರಂದು ಮಧ್ಯಾಹ್ನ 3.00 ಗಂಟೆ ಸಮಯದಲ್ಲಿ ಚಾಸಾ.1 ರವರ ಮನೆಯ ಬಳಿಗೆ ಹೋಗಿ, ಚಾಸಾ.1 ರವರ ಮನೆಯಲ್ಲಿದ್ದ 63 ಗ್ರಾಂ ಚಿನ್ನದ ಲಾಂಗ್ ನೆಕ್ಲೆಸ, 10 ಗ್ರಾಂ ಓಲೆ ಮತ್ತು ಜುಮುಕಿ, 08 ಗ್ರಾಂ ಓಲೆ, ತಲಾ 03 ಗ್ರಾಂ ಎರಡು ಚಿನ್ನದ ಉಂಗುರಗಳನ್ನು ಹಾಗೂ ಮನೆಯಲ್ಲಿ ಚಾಸಾ.1 ರವರು ಕೂಡಿಸಿಟ್ಟಿದ್ದ 50,000/- ರೂಪಾಯಿ ಹಣವನ್ನು ಸಹ ಕೊಡುವಂತೆ 1ನೇ ಆರೋಪಿಯಾದ ನೀವು ಕೇಳಿದ್ದರಿಂದ, ಸದರಿ ಚಿನ್ನದ ಒಡವೆ ಮತ್ತು ಹಣವನ್ನು ಕೊಟ್ಟು ಕಳುಹಿಸಿದ್ದು, ಆ ಮೂಲಕ ಆರೋಪಿಗಳಾದ ನೀವು ಅಪ್ರಮಾಣಿಕವಾಗಿ ಚಾಸಾ.1 ರಿಂದ ಒಟ್ಟೂ 155 ಗ್ರಾಂ ಚಿನ್ನದ ಒಡವೆಗಳನ್ನು ಹಾಗೂ ರೂ.50,000/-ನಗದು ಹಣವನ್ನು ಪಡೆದು, ವಾಪಸ್ಸು ಕೊಡದೇ ವಂಚಿಸಿರುತ್ತೀರಿ, ಆ ಮೂಲಕ ಭಾ.ದಂ.ಸಂ.ಕಲಂ.420 ಸಹವಾಚಕ 34ರ ಕಾಯ್ದೆ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ?

ಎರಡನೇಯದಾಗಿ, ಮೇಲೆ ಹೇಳಿದಂತೆ ಆರೋಪಿಗಳಾದ ನೀವು ಏಕೋದ್ದೇಶದಿಂದ, ನಿಮ್ಮ ಪೈಕಿ 1ನೇ ಆರೋಪಿಯಾದ ನೀವು ಚಾಸಾ.1 ರವರ ಒಟ್ಟು 155 ಗ್ರಾಂ ಚಿನ್ನದ ಒಡವೆಗಳನ್ನು ಅಪ್ರಮಾಣಿಕವಾಗಿ ಪಡೆದು, ಅದರ ಪೈಕಿ ಒಟ್ಟು 125 ಗ್ರಾಂ 60

ಮಿಲಿಯಷ್ಟು ತೂಕದ ಒಡವೆಗಳನ್ನು 1ನೇ ಆರೋಪಿಯ ಹೆಸರಿನಲ್ಲಿ ಪಿರಿಯಾಪಟ್ಟಣದ ನಿಧಿ ಗೋಲ್ಡ್ ಲೋನಿನಲ್ಲಿ ಗಿರವಿ ಇಟ್ಟಿದ್ದು ಹಾಗೂ 1ನೇ ಆರೋಪಿಯಾದ ನೀವು ಉಳಿದ ಅಂದರೇ ಚಾಸಾ.1 ರವರಿಂದ ಈಸಿಕೊಂಡಿದ್ದ ಚಿನ್ನದ ಒಡವೆಗಳ ಪೈಕಿ 8 ಗ್ರಾಂ ತೂಕದ ಒಂದು ಜೊತೆ ಹಿರೆಕಾಯಿ ಜುಮುಕಿ, 7 ಗ್ರಾಂ ತೂಕದ ಒಂದು ಜೊತೆ ಕಿವಿಗಳಿಗೆ ನೇತು ಹಾಕುವ ಓಲೆಗಳು, ತಲಾ 3 ಗ್ರಾಂ ನ ಎರಡು ಉಂಗುರಗಳು ಇವುಗಳ ತೂಕ 06 ಗ್ರಾಂ, 9 ಗ್ರಾಂ ತೂಕದ ಒಂದು ಜೊತೆ ಓಲೆಗಳನ್ನು ಒಟ್ಟು 30 ಗ್ರಾಂ ಚಿನ್ನದ ಒಡವೆಗಳನ್ನು 1ನೇ ಆರೋಪಿಯಾದ ನೀವು ಮಾರಾಟ ಮಾಡಿ ಚಾಸಾ.1 ರವರನ್ನು ವಂಚಿಸಿರುತ್ತೀರಿ, ಆ ಮೂಲಕ ಭಾ.ದಂ.ಸಂ.ಕಲಂ.417 ಸಹವಾಚಕ 34ರ ಕಾಯ್ದೆ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ?

ಮೂರನೇಯದಾಗಿ, ದಿನಾಂಕ 05.05.2022 ರಂದು ಸಂಜೆ 7.00 ಗಂಟೆ ಸಮಯದಲ್ಲಿ ಚಾಸಾ.1 ಕೆ.ವೈ ಮೇಘ ರವರು ಆರೋಪಿಗಳಾದ ನೀವು ವಾಸವಾಗಿರುವ ಪಿರಿಯಾಪಟ್ಟಣದ ಟೌನಿನ ರುದ್ರಪ್ಪ ಬಡಾವಣೆಯಲ್ಲಿನ ಮನೆಗೆ ಹೋಗಿ, ತನ್ನ ಚಿನ್ನದ ಒಡವೆಗಳನ್ನು ಬಿಡಿಸಿಕೊಳ್ಳುವಂತೆ ಆರೋಪಿಗಳಾದ ನಿಮ್ಮನ್ನು ಕೇಳಿದಕ್ಕೆ, ಆರೋಪಿಗಳಾದ ನೀವು ಏಕೋದ್ದೇಶದಿಂದ, ನಿಮ್ಮ ಪೈಕಿ 2ನೇ ಆರೋಪಿಯಾದ ನೀವು ಈಗ ನಾನು ನಂದಿನಿ ಅಲ್ಲ ಲಕ್ಷ್ಮೀದೇವರು ಎಂದು ಅವರ ಮನೆಯಲ್ಲಿದ್ದ ಮೊಬೈಲ್ ಚಾರ್ಜರ್ ವೈರಿನಿಂದ ಚಾಸಾ.1 ರವರ ಬೆನ್ನಿಗೆ, ಎರಡು ಕೈಗಳಿಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿ, ಆ ಮೂಲಕ ಭಾ.ದಂ.ಸಂ.ಕಲಂ.324 ಸಹವಾಚಕ 34ರ ಕಾಯ್ದೆ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ?

ಕೊನೇಯದಾಗಿ, ದಿನಾಂಕ 10.05.2022 ರಂದು 1ನೇ ಆರೋಪಿಯಾದ ನೀವು ಚಾಸಾ.3 ಸೋಮೇಗೌಡ ರವರಿಗೆ ಕರೆ ಮಾಡಿ, ಚಾಸಾ.1 ಕೆ.ವೈ ಮೇಘ ರವರನ್ನು ಪಿರಿಯಾಪಟ್ಟಣ ಟೌನಿನ ರುದ್ರಪ್ಪ ಬಡವಾಣೆಯಲ್ಲಿನ ಆರೋಪಿಗಳಾದ ನಿಮ್ಮ ಬಾಡಿಗೆ ಮನೆಗೆ ಕರೆಸಿದ್ದು, ಆಗ ಚಾಸಾ.1 ರವರು ತನ್ನ ಒಡವೆಗಳನ್ನು ಕೊಡಿ ಎಂದು 1ನೇ ಆರೋಪಿಯಾದ ನಿಮ್ಮನ್ನು ಕೇಳಿದ್ದಕ್ಕೆ ಚಿನ್ನದ ಒಡವೆಗಳನ್ನು ಯಾಕೆ ಕೇಳುತ್ತಿದ್ದೀಯಾ ನೀನು ದೇವರಿಗೆ ಕೊಟ್ಟಿರುವುದು ಎಂದು ಅದೇ ದಿನ ಮಧ್ಯಾಹ್ನ 2.00 ಗಂಟೆಯಲ್ಲಿ, 1ನೇ ಮತ್ತು 2ನೇ ಆರೋಪಿಗಳಾದ ನೀವು ನಿಮ್ಮ ಕಾಲಿನಿಂದ ಚಾಸಾ.1 ರವರನ್ನು ತುಳಿದು ಹಾಗೂ ನಿಮ್ಮ ಕೈಗಳಿಂದ ಚಾಸಾ.1 ರವರಿಗೆ ಹೊಡೆದು ಸಾಮಾನ್ಯ ಸ್ವರೂಪದ

ಗಾಯವನ್ನುಂಟು ಮಾಡಿ, ಆ ಮೂಲಕ ಭಾ.ದಂ.ಸಂ.ಕಲಂ.323 ಸಹವಾಚಕ 34 ರ ಕಾಯ್ದೆ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ?

ಈ ಮೇಲ್ಕಂಡ ದೋಷಾರೋಪಣೆಗೆ ನೀವು ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸಿದ್ದೇನೆ.

ದಿನಾಂಕ **(ಯೋಗೇಶ.ಎಂ.ಆರ್.)**
ಪಿರಿಯಾಪಟ್ಟಣ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿ.,
ಪಿರಿಯಾಪಟ್ಟಣ.